ಬೈಂದೂರು-ಗಂಗನಾಡು-ಶಾರ್ನಿ ರಸ್ತೆ

203(305) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಬೈಂದೂರಿನಿಂದ ಸಾಗರಕ್ಕೆ ಅತೀ ಹತ್ತಿರವಾಗುವ ಬೈಂದೂರು-ಗಂಗನಾಡು-ಶಾರ್ನಿ ರಸ್ತೆ ನಿರ್ಮಾಣಕ್ಕೆ 1997-98 ರಲ್ಲಿ ನಬಾರ್ಡ್ ಅಂದಾಜು ಪಟ್ಟಿ ಸಲ್ಲಿಸಲಾಗಿರುವುದು ನಿಜವೇ?

2. ಹಾಗಿದ್ದಲ್ಲಿ ಈ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ?

3. ವೈಡ್ ಲೈಫ್‌ನಲ್ಲಿ ಈ ಕೂಡಲೇ ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಿ ರಸ್ತೆ ನಿರ್ಮಾಣದ ಪ್ರಕ್ರಿಯೆಗೆ ಚಾಲನೆ ನೀಡಬಹುದೇ?

4. ಈ ರಸ್ತೆ ನಿರ್ಮಾಣಗೊಂಡಲ್ಲಿ ಬೈಂದೂರಿನಿಂದ ಸಾಗರಕ್ಕೆ ಭಾರಿ ಹತ್ತಿರದಲ್ಲಿ ಸಂಪರ್ಕ ಸಾಧ್ಯವಾಗುತ್ತದೆ, ವಿಳಂಬ ಮಾಡದೇ ಕೂಡಲೇ ಅನುಷ್ಠಾನಗೊಳಿಸಬಹುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಗಂಗನಾಡು ಕಾರ್ನಿ ರಸ್ತೆ ನಿರ್ಮಾಣಕ್ಕೆ ರೂ. 70.00 ಲಕ್ಷ ಮೊತ್ತದ ಅಂದಾಜನ್ನು ತಯಾರಿಸಿ ನಬಾರ್ಡ್ ಅನುಮೋದನೆಗೆ ಆರ್‌ಐಡಿಎಫ್-3ರಡಿ (97-98) ಕಳುಹಿಸಲಾಗಿತ್ತು. ಈ ಪ್ರಸ್ತಾವನೆಯು ಸಂಪೂರ್ಣ ಸಂಪರ್ಕ ಕಲ್ಪಿಸದ ಕಾರಣ ಮತ್ತು ಪ್ರಸ್ತಾವಿತ ರಸ್ತೆಯ ಉದ್ದವು) ಸಂರಕ್ಷಿತ ಅರಣ್ಯ ಪ್ರದೇಶದಲ್ಲಿದೆ (ವನ್ಯಜೀವಿ ಧಾಮ) ಎಂಬ ಕಾರಣಕ್ಕಾಗಿ ನಬಾರ್ಡ್ ಈ ಪ್ರಸ್ತಾವನೆಯನ್ನು ತಿರಸ್ಕರಿಸಿರುತ್ತದೆ.

2. ಪ್ರಸ್ತಾವಿತ ರಸ್ತೆಯು ಕಾಲುದಾರಿಯಾಗಿದ್ದು, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬಾರದ ಕಾರಣ ಈ ರಸ್ತೆ ನಿರ್ಮಾಣಕ್ಕೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

3. ಈ ವಿಷಯವು ಅರಣ್ಯ ಇಲಾಖೆಯ ಕಾರ್ಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಆದಾಗ್ಯೂ ಈ ಯೋಜನೆಯ ಪ್ರಾಮುಖ್ಯತೆಯನ್ನು ಪರಿಗಣಿಸಿ ಜೂನ್ 1999ರಲ್ಲಿ ಲೋಕೋಪಯೋಗಿ ಇಲಾಖೆಯ ಉಡುಪಿ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಪ್ರಸ್ತಾವನೆಯನ್ನು ಅರಣ್ಯ ಇಲಾಖೆಯ ಅನುಮೋದನೆಗಾಗಿ ಕಳುಹಿಸಿರುತ್ತಾರೆ.

4. ಈ ವಿಷಯವನ್ನು ಪರಿಗಣಿಸಲಾಗುತ್ತಿದೆ.

ದೂರವಾಣಿ ಇಲಾಖೆ ಹಾಳುಗೆಡಿಸಿದ ರಸ್ತೆಗಳ ದುರಸ್ತಿ

204 (306) ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದೂರವಾಣಿ ಸಂಪರ್ಕ ಕಲ್ಪಿಸುವಾಗ ಲೋಕೋಪಯೋಗಿ ರಸ್ತೆಯನ್ನು ಅಗೆಯಲು ದೂರವಾಣಿ ಇಲಾಖೆಯವರು ಹಣ ಪಾವತಿಸುತ್ತಿದ್ದು ಇದು ಸರ್ಕಾರಕ್ಕೆ ಜಮಾ ಆಗುತ್ತಿದೆಯೇ?

ಅ) ಕುಂದಾಪುರ ತಾಲ್ಲೂಕು ಮಟ್ಟದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಈ ರಸ್ತೆಯ ದುರಸ್ತಿಗೆ ಹಣ ಬಂದಿರುವುದಿಲ್ಲವೆಂದು ಹೇಳುತ್ತಾರೆ ಇದು ನಿಜವೇ?

ಇ) ಈ ಹಾಳುಗೆಡಿಸಲಾದ ರಸ್ತೆಗಳ ದುರಸ್ತಿಯನ್ನು ಲೋಕೋಪಯೋಗಿ ಇಲಾಖೆ ಕೈಗೊಂಡಿದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ದೂರವಾಣಿ ಇಲಾಖೆಯವರು ಲೋಕೋಪಯೋಗಿ ಇಲಾಖೆ ರಸ್ತೆ ಅಗೆದಿರುವುದನ್ನು ದುರಸ್ತಿ ಮಾಡಲು ಹಣ ಪಾವತಿಸುತ್ತಾರೆ. ಈ ಹಣವನ್ನು ಸರ್ಕಾರಕ್ಕೆ ಜಮೆ ಮಾಡಲಾಗುತ್ತಿದೆ.

ಆ) ಲೋಕೋಪಯೋಗಿ ಇಲಾಖೆ ರಸ್ತೆಯ ದುರಸ್ತಿ ಕಾಮಗಾರಿಗಳನ್ನು ಲೆಕ್ಕ ಶೀರ್ಷಿಕೆ "3054 ರಸ್ತೆ ಮತ್ತು ಸೇತುವೆ (ಯೋಜನೇತರ)" ಅನುದಾನ ದಡಿಯಲ್ಲಿ ಕೈಗೊಳ್ಳಲಾಗುತ್ತಿದೆ. ರಸ್ತೆ ದುರಸ್ತಿಗೆ ಈ ಲೆಕ್ಕ ಶೀರ್ಷಿಕೆಯಡಿ ಹಣ ಭರವಸೆ ಪತ್ರವನ್ನು ಸರ್ಕಾರವು ನೀಡುತ್ತಿದೆ.

ಇ) ಲೋಕೋಪಯೋಗಿ ಇಲಾಖೆ ರಸ್ತೆಗಳ ದುರಸ್ತಿಯನ್ನು ವಾರ್ಷಿಕ ನಿರ್ವಹಣೆಗೆ ನೀಡುವ ಅನುದಾನದಲ್ಲಿ ನಿಯಮಿತವಾಗಿ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ನಬಾರ್ಡ್ ಆರ್.ಐ.ಡಿ.ಎಫ್. ನಲ್ಲಿ ರಸ್ತೆ ಸುಧಾರಣೆಯ ಪ್ರಸ್ತಾವನೆಗಳು ಮತ್ತು ಬಿಡುಗಡೆಯಾಗಿರುವ ಹಣ, ದುರಸ್ತಿಗೊಂಡ ರಸ್ತೆ

205 (307) ಶ್ರೀ ಗೋಪಾಲಪೂಜಾರಿ ಕೆ. (ಬೈಂದೂರು) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ರಾಜ್ಯದಲ್ಲಿ ನಬಾರ್ಡ್ ಆರ್‌ಐಡಿಎಫ್ ಫಂಡಿನಡಿಯಲ್ಲಿ ಕಳೆದ 3 ವರ್ಷಗಳಿಂದೀಚೆಗೆ ಗ್ರಾಮೀಣ ರಸ್ತೆ ಸುಧಾರಣೆಗಾಗಿ ಕಳುಹಿಸಿದ ಪ್ರಸ್ತಾವನೆಗಳು ಎಷ್ಟು?

2. ಅವುಗಳಲ್ಲಿ ಮಂಜೂರಾಗಿರುವ ಪ್ರಸ್ತಾವನೆಗಳು ಎಷ್ಟು?

3. ಮಂಜೂರಾದ ಪ್ರಸ್ತಾವನೆಗಳಿಗೆ ನಬಾರ್ಡ್‌ನಿಂದ ಬಿಡುಗಡೆಯಾಗಿರುವ ಹಣ ಎಷ್ಟು? ಖರ್ಚಾಗಿರುವ ಹಣ ಎಷ್ಟು?

4. ರಸ್ತೆ ದುರಸ್ತಿ ಮತ್ತು ಡಾಂಬರೀಕರಣ ಮಾಡಿದ ಕಿಲೋಮೀಟರುಗಳೆಷ್ಟು (ವಿಧಾನಸಭಾ ಕ್ಷೇತ್ರವಾರು ಮಾಹಿತಿ ಕೊಡುವುದು)?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ರಾಜ್ಯದಲ್ಲಿ ಆರ್‌ಐಡಿಎಫ್ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ನಬಾರ್ಡ್ ಅನುಮೋದನೆಗಾಗಿ ಕಳುಹಿಸಲಾದ ಪ್ರಸ್ತಾವನೆಗಳ ವಿವರ ಕೆಳಕಂಡಂತಿವೆ.

2. ವಿವರ ಕೆಳಕಂಡಂತಿವೆ.